(ಇಂದು ದಿನಾಂಕಃ **23-12-2025** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

## ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಎಂ ಎಚ್ ವಕೀಲರಿಂದಃ

ನಿಪಿ-7 ರ 9 ನೇ ಪುಟದಲ್ಲಿ ದಿನಾಂಕಃ 18-05-2019 ರಂದು ಆರೋಪಿ ನನ್ನ ಖಾತೆಗೆ ರೂ.1,00,000/- ಗಳನ್ನು ಜಮಾ ಮಾಡಿದ್ದರ ಬಗ್ಗೆ ನಮೂದು ಇದೆ ಎಂದರೆ ಸರಿ. ನಿಪಿ-7 ರ 16 ನೇ ಪುಟದಲ್ಲಿ ದಿನಾಂಕಃ 15-04-2020 ರಂದು ಆರೋಪಿ ನನ್ನ ಖಾತೆಗೆ ರೂ.4,00,000/- ಗಳನ್ನು ಜಮಾ ಮಾಡಿದ್ದರ ಬಗ್ಗೆ ನಮೂದು ಇದೆ ಎಂದರೆ ಸರಿ. ಸದರಿ ಹಣ ಆರೋಪಿಯ ಶಶಾಂಕ್ ಎಲೆಕ್ಟ್ರಿಕಲ್ಸ್ ಎನ್ನುವ ಅಂಗಡಿಯ ಖಾತೆಯಿಂದ ಜಮಾ ಆಗಿರುತ್ತದೆ ಎಂದರೆ ಸರಿ. ಸದರಿ ಹಣ ಜಮಾ ಆಗಿರುವ ಬಗ್ಗೆ ನಿಡಿ-4 ರಲ್ಲಿ ಸಹ ನಮೂದು ಇದೆ ಎಂದರೆ ಸರಿ. ಸಾಕ್ಷಿಗೆ ಆರೋಪಿಯ ಬ್ಯಾಂಕ್ ಖಾತೆಯ ವಿವರಗಳನ್ನು ತೋರಿಸಿದ್ದು, ಅದನ್ನು ಸಾಕ್ಷಿ ನೋಡಿ ಗುರುತಿಸಿದ ಕಾರಣ **ನಿಡಿ-5** ಎಂದು ಗುರುತಿಸಲಾಯಿತು. ನಾನು ಹಾಜರು ಪಡಿಸಿರುವ ಖಾತೆಯಲ್ಲಿ ಆರೋಪಿ ನನಗೆ ನೀಡಿರುವ ಚೆಕ್ ನ ಹಣ ಜಮಾ ಆಗಿರುವ ಬಗ್ಗೆ ನನ್ನ ಖಾತೆಯ ವಿವರದಲ್ಲಿ ನಮೂದಾಗಿರುತ್ತದೆ. ನಿಪಿ-7 ರಲ್ಲಿ ಆರೋಪಿ ನೀಡಿದ ಚೆಕ್ ಜಮಾ ಆಗಿರುವ ಬಗ್ಗೆ ನಿಖರವಾದ ಎಂಟ್ರಿಯನ್ನು ಗುರುತಿಸಲು ಆಗುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಎಂಟ್ರಿಗಳನ್ನು ಖಾತರಿಪಡಿಸಿಕೊಂಡು ತಿಳಿಸಬಹುದು ಎಂದು ನುಡಿದಿರುತ್ತಾರೆ. 2018 ರಿಂದ ನಾನು ಆರೋಪಿಗೆ ಸಾಕಷ್ಟು ಬಾರಿ ಹಣದ ವ್ಯವಹಾರ ಮಾಡಿದ್ದು, ಸದರಿಯವರು ಅದನ್ನು ಆಗಾಗ ಮರಳಿಸಿರುತ್ತಾರೆ. ನಾನು ಆರೋಪಿಯಿಂದ ಈ ಹಿಂದೆ ಚೆಕ್ ಮುಖಾಂತರ ಹಣ ಮರುಪಾವತಿ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ 4 ಲಕ್ಷ ಹಣವನ್ನು ನಾನು ಆಗಾಗ ಖಾತೆಯಿಂದ ತೆಗೆದುಕೊಂಡಿರುತ್ತೇನೆ ಎಂದರೆ ಸರಿ. ನಾನು ದಿನಾಂಕಃ 06-05-2020 ರಂದು ರೂ. 14,170/- ಗಳನ್ನು ಯುನೈಟೆಡ್ ಇನ್ಸೂರೆನ್ಸ ಕಂಪನಿಗೆ ಪಾವತಿಸಿರುತ್ತೇನೆ ಎಂದರೆ ಸರಿ. ಸದರಿ ಹಣ ನನ್ನ ಹೆಂಡತಿಯ ಹೆಸರಿನಲ್ಲಿದ್ದ ಸದರಿ ಕಂಪನಿಯ ಪೋರ್ಟಲ್ ಗೆ ಸಂಬಂಧಿಸಿದ ಹಣ ಎಂದರೆ ಸರಿ. ನನಗೆ ಆರೋಪಿ ನೀಡಿದ 4 ಲಕ್ಷ ಹಣವನ್ನು ನಾನು ಮರುಪಾವತಿಸಿಲ್ಲ ಎಂದರೆ ಸಾಕ್ಷಿಯು ನಾನು ಈ ಹಿಂದೆ ಆರೋಪಿಗೆ ನೀಡಿದ 4 ಲಕ್ಷ ಹಣವನ್ನು ಆರೋಪಿ ನನಗೆ ಆರ್ ಟಿ ಜಿ ಎಸ್ ಮುಖಾಂತರ ಮರು ಪಾವತಿಸಿರುತ್ತಾನೆ ಎಂದು ನುಡಿದಿರುತ್ತಾರೆ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ನಾನು ನಗದು ರೂಪದಲ್ಲಿ ಆರೋಪಿಗೆ ಪಾವತಿಸಿದ್ದೆ. ಸದರಿ ಅಂಶವನ್ನು ನನ್ನ ದೂರಿನಲ್ಲಿ ಹಾಗೂ ಸಾಕ್ಷಿಯಲ್ಲಿ ಬರೆಸಿರುವುದಿಲ್ಲ. ಈ ಹಿಂದೆ ಆರೋಪಿ ನೀಡಿದ ಚೆಕ್ ಗಳನ್ನು ದುರುಪಯೋಗ ಪಡಿಸಿಕೊಂಡು ಆತನ ವಿರುದ್ಧ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಈ ಹಿಂದೆ 3-4 ಚೆಕ್ ಗಳನ್ನು ನೀಡಿದ್ದು, ಸದರಿ ಚೆಕ್ ಗಳು ನಗದೀಕರಣವಾಗಿರುತ್ತವೆ. ಸದರಿ ಚೆಕ್ ಗಳು ನಗದೀಕರಣವಾದ ಬಗ್ಗೆ ನಿಪಿ-7 ರಲ್ಲಿ ನಮೂದಿಲ್ಲ ಎಂದರೆ ಸರಿಯಲ್ಲ. ಸದರಿ

ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಆದಾಯ ತೋರಿಸುವ ಕುರಿತು ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ. ಆರೋಪಿ ನನಗೆ ತಾನು ಕೊಟ್ಟಿದ್ದ ರೂ. 4 ಲಕ್ಷ ಗಳನ್ನು ಮರಳಿ ಪಾವತಿಸುವಂತೆ ಕೇಳಿದ್ದಕ್ಕೆ ನನ್ನ ಹಾಗೂ ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇರದಿದ್ದರೂ ಸಹ ನಾನು ಆತನ ಹಳೆಯ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡು ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**